ಬೆಳಗಾವಿ ಜಿಲ್ಲೆಯಲ್ಲಿ ಪಹಣಿ ಪತ್ರಿಕೆ ಪಡೆಯಲು ವಿಳಂಬ

4285(4965) ಶ್ರೀ ಅಪ್ಪಯ್ಯ ಗೌಡ ಬಸಗೌಡ ಪಾಟೀಲ್ (ಸಂಕೇಶ್ವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ರ ಕಛೇರಿಗಳಲ್ಲಿ ನೀಡುತ್ತಿರುವ ಪಹಣಿ ಪತ್ರಿಕೆಯಲ್ಲಿ ಗಣಕೀಕೃತದಿಂದ ತುಂಬಾ ತಪ್ಪುಗಳು ಉಂಟಾಗಿ ಸಾರ್ವಜನಿಕರು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಪಹಣಿ ಪತ್ರಿಕೆ ಪಡೆಯಲು ಇಡೀ ದಿನ ಕಾಯಬೇಕಾಗಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ : ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

ಇ) ರೈತರಿಗೆ ಸರಿಯಾಗಿ ಪಹಣಿ ಪತ್ರಿಕೆ ನೀಡಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬೆಳಗಾಂ ತಾಲ್ಲೂಕಿನ ಕೆಲವು ಆರ್‌ಟಿಸಿಗಳ ತಪ್ಪುಗಳನ್ನು ಈಗಾಗಲೇ ಸರಿಪಡಿಸಲಾಗಿದೆ. 1 ತಿಂಗಳ ಕಾಲಾವಧಿಯಲ್ಲಿ ಎಲ್ಲಾ ತಪ್ಪುಗಳನ್ನು ಸರಿಪಡಿಸಲಾಗುವುದು. 2 ರಿಂದ 3 ನಿಮಿಷಗಳ ಕಾಲಾವಧಿಯಲ್ಲಿ ರೈತರುಗಳಿಗೆ ಸೇವೆಗಳನ್ನು ಒದಗಿಸಲಾಗುವುದು ಅದಾಗ್ಯೂ ಕೆಲವು ವೇಳೆ ಒತ್ತಡವಿದ್ದಲ್ಲಿ ರೈತರ ಸೇವೆಯನ್ನು ಪೂರೈಸಲು 1 ಗಂಟೆ ಕಾಲವಕಾಶಬೇಕಾಗಿದೆ. ಒತ್ತಡದ ಸಮಯದಲ್ಲಿ ರೈತರು ಒಂದು ಘಂಟೆಗಿಂತಲೂ ಅಧಿಕ ಅವಧಿಗೆ ಕಾಯದೆ ಇರುವಂತೆ ಹೆಚ್ಚುವರಿ ಕಿಯಾಸ್ಕಗಳನ್ನು ತೆರೆಯಲು ಬೆಳಗಾಂ ಜಿಲ್ಲಾಧಿಕಾರಿಗಳು ಒಳಗೊಂಡಂತೆ ಎಲ್ಲಾ ಜಿಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆ) ರೈತರು ಆರ್.ಟಿ.ಸಿ.ಗಳನ್ನು ಪಡೆಯಲು ಭೂಮಿ ಕೇಂದ್ರದ ಮುಂದೆ ದಿನವಿಡಿ ಕಾಯಬೇಕಾಗಿಲ್ಲ. ಕಿಯಾಸ್ಕಗಳ ಮುಂದೆ ಬಾರಿಉದ್ದದ ಸರದಿ ಇರುತ್ತದೆ. ಡಾಟ್‌ಮ್ಯಾಟ್ರಿಕ್ಸ್ ಪ್ರಿಂಟರ್ ನಿಂದ ಅತಿ ವೇಗದಲ್ಲಿ ರೈತರಿಗೆ ಒದಗಿಸುವ ಸಲುವಾಗಿ ಬೆಳಗಾಂ ಜಿಲ್ಲೆಯಲ್ಲಿ ಲೇಸರ್ ಪ್ರಿಂಟರ್ಸ್ ಗಳನ್ನು ಅಳವಡಿಸಲಾಗಿದೆ.

ಇ) ರೈತರ ಅನುಕೂಲಕ್ಕಾಗಿ ಡಾಟ್ ಮಾಟ್ರಿಕ್ಸ್ ಪ್ರಿಂಟರ್‌ಗಳಿಗಿಂತ ಅಧಿಕ ವೇಗದಲ್ಲಿ ಆರ್‌ಟಿಸಿ ಗಳನ್ನು ಮುದ್ರಿಸಲು ಬೆಳಗಾಂ ಜಿಲ್ಲೆಯಲ್ಲಿ ಲೇಸರ್ ಪ್ರಿಂಟರ್‌ಗಳನ್ನು ಅಳವಡಿಸಲಾಗಿದೆ.

ರಾಜ್ಯದಲ್ಲಿ ಏಕರೂಪ ಧಾರ್ಮಿಕ ದತ್ತಿ ಶಾಸನ

4287(5214) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಧಾರ್ಮಿಕ ದತ್ತಿ ಏಕರೂಪ ಶಾಸನವನ್ನು ಅನುಷ್ಠಾನಗೊಳಿಸಲಾಗಿದೆಯೇ :

ಆ) ಹಾಗಿದ್ದಲ್ಲಿ, ಅದರಲ್ಲಿನ ಮುಖ್ಯ ಅಂಶಗಳೇನು ;

ಇ) ಈ ಶಾಸನದಲ್ಲಿ ಕೆಲವಾರು ನ್ಯೂನತೆಗಳು ಇರುವುದನ್ನು ಸರ್ಕಾರವು ಮನಗಂಡಿದೆಯೇ; ಇದರಿಂದಾಗಿ ಪರಂಪರಾನುಗತವಾಗಿ ದೇವಸ್ಥಾನದ ಟ್ರಸ್ಟಿ ಹಾಗೂ ದೇವಾಲಯದ ಪೂಜಾ ಕೈಂಕರ್ಯ ನಡೆಸುತ್ತಾ ಇರುವವರಿಗೆ ಬಾಧಕ ವಾಗಿರುವುದಿಲ್ಲವೇ :

ಈ) ಹಾಗಿದ್ದಲ್ಲಿ, ಈ ಶಾಸನವನ್ನು ಪುನರ್ ಪರಿಶೀಲಿಸಲಾಗುವುದೇ ?